# ಆಹಾ ಸುದ್ದಿ!

★ ಸಸಿತೋಟ

ಅಮೆರಿಕಾದ ಅಯೋವಾದಲ್ಲಿ ಇತ್ತೀಚೆಗೆ ಮದುವೆಯಾದ ಯುವತಿಯೊಬ್ಬಳು ತನ್ನ ಮದುವೆಗೆ ಪುಷ್ಪಗುಚ್ಛವನ್ನು ನಿಷೇಧಿಸಿ ಫರ್ಮಾನು ಹೊರಡಿಸಿದಳಂತೆ. ಹೂವಿನ ಬದಲು ನಾಯಿಮರಿಗಳನ್ನು ವಧುವಿನ ಸಖಿಯರು ಹಿಡಿದುಕೊಂಡು ಖುಷಿಪಟ್ಟರು. ಹೂವಿನ ಹಾರ ಬದಲಾಯಿಸುವ ಸಂಪ್ರದಾಯ ಅಲ್ಲಿಯೂ ಇದ್ದಿದ್ದರೆ...!



ಪ್ಯಾಲೆಸ್ಟೀನ್‌ನ ಈ ಹನ್ನೆರಡರ ಹೈದನಿಗೆ ವಕ್ರವಾಗಿ ನಡೆಯುವುದೆಂದರೆ ಮೋಜಿನ ವಿಷಯ. ಈ ಮೋಜನ್ನೇ ಗಿನ್ನೆಸ್ ದಾಖಲೆ ಮಾಡಲು ಬಳಸಿಕೊಂಡಿರುವ ಯೂಸೆಫ್ ಅಲ್ ಬಥಿನಿ ನೇರ ನಡೆಗಿಂತ ವಕ್ರ ನಡೆಯೇ ಮೇಲು ಎಂಬುದನ್ನು ತೋರಿಸಿಕೊಟ್ಟಿದ್ದಾನೆ.



ಸ್ವಿಜರ್ಲೆಂಡ್‌ನಲ್ಲಿ ಇತ್ತೀಚೆಗೆ ಬ್ಯಾಂಕ್ ಆಜೂಬಾಜೂ ಕಟ್ಟಡಗಳ ಸ್ನಾನಗೃಹ, ಶೌಚಾಲಯದ ಪೈಪ್‌ಗಳಲ್ಲಿ ಕಂತೆ ಕಂತೆ ಯುರೋ ನೋಟುಗಳು ಸಿಕ್ಕಿಕೊಂಡು ನೀರು ಕಟ್ಟಿಕೊಳ್ಳುವುದು ಮಾಮೂಲಾಗಿಬಿಟ್ಟಿದೆಯಂತೆ. ಕಪ್ಪು ಹಣವಿಡುವ ಸ್ವರ್ಗವೆನಿಸಿಕೊಂಡ ಆ ದೇಶದಲ್ಲಿ ಹಣದ ಜಾಗ ಎಲ್ಲಿ ಎಂಬುದನ್ನು ಈ ರೀತಿ ತೋರಿಸಬಾರದಿತ್ತು.

ಬೆಲ್ಜಿಯಂನ ಹೋಟೇಲ್ ಒಂದಕ್ಕೆ ನೀವು ಒಂಟಿಯಾಗಿ ಹೋದರೂ ಪರವಾಗಿಲ್ಲ, ಹೋಟೇಲ್ ಸಿಬ್ಬಂದಿ ಜಂಟಿಯನ್ನು ಒದಗಿಸುತ್ತಾರಂತೆ. ಹಾಗಂತ ಕನಸು ಕಾಣಲು ಶುರು ಮಾಡಬೇಡಿ, ನಿಮ್ಮ ಏಕಾಂಗಿತನ ಹೋಗಲಾಡಿಸಲು ಬಣ್ಣ ಬಣ್ಣದ ಮೀನು ಒದಗಿಸುತ್ತಾರಂತೆ. ಅದರ ಜೊತೆ ಸೆಲ್ಫಿ ತೆಗೆದುಕೊಳ್ಳುತ್ತ ರಾತ್ರಿ ಕಳೆಯಲಡ್ಡಿಯಿಲ್ಲ.



ಆಸ್ಟ್ರೇಲಿಯಾದ ಕಡಲ ತೀರದಲ್ಲಿ ಕಲಾವಿದ ನಿರ್ಮಿಸಿದ್ದ ಈ ಮರಳಿನ ಹಾಸ್ಟೆಲ್‌ನಲ್ಲಿ ಎಲ್ಲವೂ ಇತ್ತಂತೆ– ಬಾರ್, ಕುಡಿದಿದ್ದು ಜಾಸ್ತಿಯಾಗಿ ತಲೆಗೇರಿದರೆ ಮಲಗಲು ಐಷಾರಾಮಿ ಹಾಸಿಗೆ.. ಹೀಗೆ ಎಲ್ಲವೂ. ಆದರೆ ಬೆಳಿಗ್ಗೆ ಎದ್ದಾಗ ಅದರಲ್ಲಿದ್ದ ನಿವಾಸಿಗಳಿಗೆ ಕಂಡಿದ್ದು ಬಟಾಬಯಲು. ಹಾಸ್ಟೆಲ್ ಎದುರಿನ ಕಲಾಕೃತಿ ನೋಡಿ ತಮ್ಮ ಅವಸ್ಥೆಯನ್ನು ಮೊದಲೇ ಊಹಿಸಿಕೊಳ್ಳಬಹುದಿತ್ತು ಅದರ ನಿವಾಸಿಗಳು!




ಸ್ಪೇನಿನಲ್ಲಿ ಸರ್ಕಾರದ ವಿರುದ್ಧ ಭಾರಿ ಪ್ರತಿಭಟನೆ ನಡೆಯುತ್ತಿದೆ. ಈ ಮಹಿಳೆ ಪಾತ್ರೆಯನ್ನು ಸೌಟಿನಿಂದ ಕುಟ್ಟುತ್ತ ಆ ಪ್ರತಿಭಟನೆಗೆ ಸಾಥ್ ನೀಡಿದಳಂತೆ. ಕೇವಲ ಗಂಡನ ತಲೆಗೆ ಕುಟ್ಟಿ ಪ್ರತಿಭಟನೆ ವ್ಯಕ್ತಪಡಿಸಲು ಬಳಕೆಯಾಗುತ್ತಿದ್ದ ಈ ಅಸ್ತ್ರವನ್ನು ಹೀಗೂ ಬಳಸಬಹುದು ಎಂದು ತೋರಿಸಿಕೊಟ್ಟಿರಬಹುದು.